ಹ್ಯಾಂಡ್ಲೂಮ್ ಟೆಕ್ನಾಲಜಿ ಡಿಪ್ಲೊಮದಾರರಿಗೆ ಟೆಕ್ಸ್‌ಟೈಲ್ ಇಂಜಿನಿಯರಿಂಗ್ ಶಿಕ್ಷಣ

4778 - ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಟೆಕ್ಸ್‌ಟೈಲ್ ಟೆಕ್ನಾಲಜಿ ಡಿಪ್ಲೊಮಾದಾರರಿಗೆ ಟೆಕ್ಸ್‌ಟೈಲ್ ಇಂಜಿನಿಯರಿಂಗ್ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಿದ್ದು ಹ್ಯಾಂಡ್ಲೂಮ್ ಟೆಕ್ನಾಲಜಿ ಡಿಪ್ಲೊಮಾದಾರರಿಗೆ ಪ್ರವೇಶಾರ್ಹತೆಯನ್ನು ನೀಡಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಆ) *ಹ್ಯಾಂಡ್ಲೂಮ್ ಟೆಕ್ನಾಲಜಿ ಡಿಪ್ಲೊಮಾದಾರರಿಗೆ ಟೆಕ್ಸ್‌ಟೈಲ್ ಇಂಜಿನಿಯರಿಂಗ್ ಶಿಕ್ಷಣಕ್ಕೆ ಪ್ರವೇಶಾರ್ಹತೆಯನ್ನು ನೀಡಿ ಬಡ ನೇಕಾರ ವಿದ್ಯಾರ್ಥಿಗಳಿಗೆ ಅನುಕೂಲತೆಯನ್ನು ಕಲ್ಪಿಸಿಕೊಡುವ ಬಗ್ಗೆ ಸರ್ಕಾರ ಶೀಘ್ರ ಕ್ರಮಗಳನ್ನು ಜರುಗಿಸುವುದೆ?*

ಇ) *ಪ್ರಸ್ತುತ ಸಾಲಿನಲ್ಲಿ ಖಾಲಿ ಉಳಿದಿರುವ ಟೆಕ್ಸ್‌ಟೈಲ್ ಇಂಜಿನಿಯರಿಂಗ್ ಶಿಕ್ಷಣಕ್ಕೆ ಹ್ಯಾಂಡ್ಲೂಮ್ ಟೆಕ್ನಾಲಜಿ ಡಿಪ್ಲೊಮಾದಾರರರಿಗೆ ಪ್ರವೇಶಾವಕಾಶವನ್ನು ಒದಗಿಸಿ ಕೊಡಲಾಗುವುದೆ?*

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು ಟೆಕ್ಸ್‌ಟೈಲ್ ಟೆಕ್ನಾಲಜಿ ಡಿಪ್ಲೊಮಾದಾರರಿಗೆ ರಾಜ್ಯದಲ್ಲಿ ಇಂಜಿನಿಯರಿಂಗ್ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಆದರೆ ಹ್ಯಾಂಡ್‌ಲೂಂ ಟೆಕ್ನಾಲಜಿ ಡಿಪ್ಲೋಮಾದಾರರಿಗೆ ಕರ್ನಾಟಕ ತಾಂತ್ರಿಕ ಪರೀಕ್ಷಾ ಮಂಡಳಿಯ ತತ್ಸಮಾನತೆ ಇಲ್ಲದಿರುವುದರಿಂದ ಪ್ರವೇಶ ನೀಡಿರುವುದಿಲ್ಲ.

ಆ) ಹ್ಯಾಂಡ್ಲೂಮ್ ಟೆಕ್ನಾಲಜಿ ಡಿಪ್ಲೋಮಾದಾರರಿಗೆ ಬಿ.ಇ. ಪ್ರವೇಶಕ್ಕೆ ತತ್ಸಮಾನತೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸರ್ಕಾರಿ ಕೈಗಾರಿಕಾ ಕೇಂದ್ರಗಳ ಕಾರ್ಯಕ್ರಮಗಳ ಬಗ್ಗೆ

4779 - ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಸರ್ಕಾರಿ ಕೈಗಾರಿಕಾ ಕೇಂದ್ರಗಳಲ್ಲಿ ಖಾಸಗಿ ವಲಯದವರ ಸಹಕಾರದಿಂದ ಸರ್ಕಾರದ ಸವಲತ್ತುಗಳನ್ನು ವೃದ್ಧಿಸಿ ಅವರಿಗೆ ತರಬೇತಿ ಕೊಡುವ ಸರ್ಕಾರದ ಯೋಜನೆಗಳ ವಿವರಗಳೇನು?*

ಆ) *ಸದರಿ ಯೋಜನೆಯು ಜಾರಿಯಲ್ಲಿದ್ದಲ್ಲಿ ಎಲ್ಲಾ ಕೇಂದ್ರಗಳಲ್ಲಿ ಅನುಷ್ಠಾನಗೊಳಿಸಲಾಗಿದೆಯೇ?*